# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 129 ರಲ್ಲಿ ದಿನಾಂಕ: 20.03.2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 20.03.2021ರಂದು ವಾರ್ಡ್ ಸಂಖ್ಯೆ 129ರ ಮಾರ್ಚ್ ಮಾಹೆಯ ಮೊದಲನೇ ಶನಿವಾರದ ವಾರ್ಡ್‌ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ಹಾಜರಿದ್ದ ಸದಸ್ಯರು:–**

1. ಶ್ರೀ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಹಾಗೂ ವಾರ್ಡ್ ಸಂಖ್ಯೆ–129ರ ನೋಡಲ್ ಅಧಿಕಾರಿಗಳು.
2. ಶ್ರೀ ಜಯಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–129
3. ಶ್ರೀ ನರೇಶ್ ಮಾರ್ಷಲ್ ವಾರ್ಡ್–129
4. ಶ್ರೀಮತಿ ಮೀನಾ ಎನ್ ಘ.ತ್ಯಾ.ನಿ ಸಂಪರ್ಕ ಕಾರ್ಯಕರ್ತರು, ವಾರ್ಡ್–129.
5. ಶ್ರೀಮತಿ ರಾಜೇಶ್ವರಿ ಎಸ್ ಘ.ತ್ಯಾ.ನಿ ಸಂಪರ್ಕ ಕಾರ್ಯಕರ್ತರು, ವಾರ್ಡ್–129.
6. ಶ್ರೀಮತಿ ಅನಿತಾರಾಜ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–129
7. ರಾಮಣ್ಣ ಆರ್.ಡಬ್ಲ್ಯೂ.ಎ ಎನ್.ಜಿ.ಇ.ಎಫ್ ಬಡಾವಣೆ ಮಲ್ಲತ್ತಹಳ್ಳಿ.

ವಾರ್ಡ್ ಸಂಖ್ಯೆ–129ರ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

## ❖ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳು

- ವಾರ್ಡ್ ಸಂಖ್ಯೆ:129 ರಲ್ಲಿ ಸಮರ್ಪಕವಾಗಿ ಘನತ್ಯಾಜ್ಯ ನಿರ್ವಹಣೆಯನ್ನು ನಿರ್ವಹಿಸುತ್ತಿಲ್ಲದಿರುವುದಾಗಿ ಅನೇಕ ದೂರುಗಳು ಬರುತ್ತಿರುವ ಹಿನ್ನಲೆಯಲ್ಲಿ ಈ ಸಂಬಂಧ ಜಂಟಿ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ–ಕೇಂದ್ರ) ರವರು ಆದೇಶಿಸಿರುವಂತೆ ವಾರಕ್ಕೊಮ್ಮೆ ಸ.ಕಾ.ನಿ.ಅ ಘನತ್ಯಾಜ್ಯ ನಿರ್ವಹಣೆ–ರಾ.ರಾ.ನಗರ ರವರು ಅವರ ಅಧೀನದ ಸಿಬ್ಬಂದಿಗಳೊಂದಿಗೆ ತಪ್ಪದೇ ಪರಿಶೀಲನೆ ಸಭೆಯನ್ನು ನಡೆಸಿ ಸಮರ್ಪಕವಾಗಿ ನಿರ್ವಹಿಸಲು ಹಾಗೂ ದೂರುಗಳಿಗೆ ಸಂಬಂಧಿಸಿದಂತೆ ಆದ್ಯತೆ ಮೇಲೆ ಕ್ರಮವಹಿಸಲು ಸ.ಕಾ.ನಿ.ಅ ರವರಿಗೆ ನಿರ್ದೇಶಿಸಲಾಗಿದೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಮುಂದಿನ ಸಭೆಯಲ್ಲಿ ತತ್ಸಂಬಂಧ ವರದಿ ನೀಡಲು ಸೂಚಿಸಲಾಗಿದೆ.

- ಸದರಿ ವಾರ್ಡಿನಲ್ಲಿ ಪ್ರತ್ಯೇಕವಾಗಿ ಒಣಕಸವನ್ನು ಸಂಗ್ರಹಿಸಲು ಅನುಮೋದನೆ ಪಡೆದಿರುವುದಾಗಿ ಕಿರಿಯ ಆರೋಗ್ಯ ನಿರೀಕ್ಷಕರು ತಿಳಿಸಿರುವಂತೆ ಕೂಡಲೇ ಒಣಕಸವನ್ನು ವಾರ್ಡ್ ಮಟ್ಟದಲ್ಲಿನ ಎಲ್ಲಾ ಬ್ಲಾಕ್‌ಗಳಲ್ಲಿ ಸಂಗ್ರಹಿಸಲು Implementation plan ಸಿದ್ದಪಡಿಸಿ ಸಲ್ಲಿಸಲು ಸ.ಕಾ.ನಿ.ಅ ಘನತ್ಯಾಜ್ಯ ನಿರ್ವಹಣೆ–ರಾ.ರಾ.ನಗರ ರವರಿಗೆ ತಿಳಿಸಲಾಗಿದೆ.
- ಸದರಿ ಸಭೆಯಲ್ಲಿ ಚರ್ಚಿಸಿದಂತೆ ಸದರಿ ವಾರ್ಡಿನಲ್ಲಿ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರ ಇಲ್ಲದಿರುವುದು ತಿಳಿದುಬಂದಿದ್ದು, ತತ್ಸಂಬಂಧ ಕೂಡಲೇ ಸೂಕ್ತ ಸ್ಥಳವನ್ನು ಗುರುತಿಸಿ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರ ಸ್ಥಾಪಿಸಲು ಅಗತ್ಯ ಕ್ರಮವಹಿಸಲು ಹಾಗೂ ಮುಂದಿನ ಸಭೆಯಲ್ಲಿ ಇದರ ಬಗ್ಗೆ ಮಾಹಿತಿಯನ್ನು ಎಲ್ಲಾರ ಗಮನಕ್ಕೆ ತರಲು ಸ.ಕಾ.ನಿ.ಅ ಘನತ್ಯಾಜ್ಯ ನಿರ್ವಹಣೆ–ರಾ.ರಾ.ನಗರ ರವರಿಗೆ ಸೂಚಿಸಲಾಗಿದೆ.
- ಸಭೆಯಲ್ಲಿ ಉಪ ಸ್ಥಿತರಿದ್ದ, ಬಡವಾಣೆಯ ಸದಸ್ಯರುಗಳು ಸದರಿ ವಾರ್ಡ್ ನಲ್ಲಿರುವ ಬಹುಮಹಡಿ ಕಟ್ಟಡದಿಂದ ತ್ಯಾಜ್ಯವನ್ನು ಖಾಸಗಿ ವ್ಯಕ್ತಿಯವರು ಸಂಗ್ರಹಿಸಲಾಗುತ್ತಿದ್ದು, ಇದರಿಂದಾಗಿ ಸಾಕಷ್ಟು ಅನಾನೂಕೂಲವಾಗುತ್ತಿರುವುದರಿಂದ ಬಿಬಿಎಂಪಿ ವತಿಯಿಂದಲೇ ಸಂಗ್ರಹಿಸಲು ಸಭೆಯಲ್ಲಿ ಕೋರಿರುವಂತೆ ಹಾಜರಿದ್ದ ಹಿರಿಯ / ಕಿರಿಯ ಆರೋಗ್ಯ ನಿರೀಕ್ಷಕರುಗಳಿಗೆ ಸದರಿ ವಾರ್ಡಿನಲ್ಲಿರುವ ಎಲ್ಲಾ ಬಹುಮಹಡಿ ಕಟ್ಟಡ ಹಾಗೂ ಘಟಕಗಳ ಮಾಹಿತಿ ಹಾಗೂ ತ್ಯಾಜ್ಯವನ್ನು ಸಂಗ್ರಹಿಸಲಾಗುತ್ತಿರುವ ಖಾಸಗಿ ವ್ಯಕ್ತಿಗಳ ಮಾಹಿತಿಗಳೊಂದಿಗೆ ಮುಂದಿನ ಸಭೆಯಲ್ಲಿ ಚರ್ಚಿಸಲು ಹಾಜರು ಪಡಿಸಲು ಸೂಚಿಸಲಾಯಿತು.
- ಸಭೆಯಲ್ಲಿ ಚರ್ಚಿಸಿದಂತೆ ಸದರಿ ವಾರ್ಡ್ ಅನ್ನು ಘನತ್ಯಾಜ್ಯ ಸಂಗ್ರಹಣೆಗಾಗಿ 79 ಬ್ಲಾಕ್‌ಗಳಾಗಿ ವಿಂಗಡಿಸಿದ್ದು, ಎಲ್ಲಾ 79 ಬ್ಲಾಕ್‌ಗಳಿಗೆ ಆಟೋ ಟಿಪ್ಪರ್‌ಗಳನ್ನು ನಿಯೋಜಿಸದೇ ಇರುವುದಾಗಿ ಸಭೆಯಲ್ಲಿ ತಿಳಿಸಿರುವಂತೆ ತತ್ಸಂಬಧ ಸ.ಕಾ.ನಿ.ಅ ಘನತ್ಯಾಜ್ಯ ನಿರ್ವಹಣೆ–ರಾ.ರಾ.ನಗರ ರವರು ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವಂತೆ ಹಾಗೂ ಮುಂದಿನ ಸಭೆಯಲ್ಲಿ ಮಾಹಿತಿಯನ್ನು ನೀಡಲು ಸೂಚಿಸಲಾಯಿತು.
- ಮಾನ್ಯ ಆಯುಕ್ತರು ಬಿಬಿಎಂಪಿ ರವರು ಆದೇಶಿಸಿರುವಂತೆ ಪ್ರತಿ ಶುಕ್ರವಾರದಂದು ಘನತ್ಯಾಜ್ಯ ನಿರ್ವಹಣೆ ಸಿಬ್ಬಂದಿಗಳು/ಕಾಮಗಾರಿ ವಿಭಾಗದ ಸಮನ್ವಯ ಮಾಡಿಕೊಂಡು ತಪ್ಪದೇ ಸಮೂಹಿಕ ಸ್ವಚ್ಛತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಕ್ರಮವಹಿಸುವಂತೆ ಹಾಲಿ ಉಪಸ್ಥಿತರಿಂದ ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರಿಗೆ ಸಭೆಯಲ್ಲಿ ಸೂಚಿಸಲಾಗಿರುತ್ತದೆ.
- ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರ ಕೋರಿಕೆಯಂತೆ ಅನ್ನಪೂರ್ಣೇಶ್ವರಿನಗರದ ಮುಖ್ಯರಸ್ತೆಯಲ್ಲಿನ ಅಂಗಡಿಗಳಲ್ಲಿ ಉಪಯೋಗಿಸುತ್ತಿರುವ ನಿಷೇದಿಸಿರುವ ಪ್ಲಾಸ್ಟಿಕ್ ಬಳಕೆ ಮಾಡದಿರುವ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಕ್ರಮವನ್ನು ರೂಪಿಸಿ ಕೈಗೊಂಡಿರುವ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ತಿಳಿಸಲು ಸ.ಕಾ.ನಿ.ಅ ಘನತ್ಯಾಜ್ಯ ನಿರ್ವಹಣೆ–ರಾ.ರಾ.ನಗರ ರವರಿಗೆ ಸೂಚಿಸಲಾಯಿತು.

## ❖ ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶದಂತೆ ಪ್ರತೀ ಶುಕ್ರವಾರ ಎಲ್ಲಾ ವಿಭಾಗದ ಅಧಿಕಾರಿಗಳ ಸಹಭಾಗಿತ್ವದಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಂಡು ಪೌರ ಕಾರ್ಮಿಕರು ಹಾಗೂ ಸಿಲ್ಟ್ & ಟ್ರಾಕ್ಟರ್ ಕಾರ್ಮಿಕರಿಂದ ವಾರ್ಡ್ ವ್ಯಾಪ್ತಿಯ ಬ್ಲಾಕ್ ಸ್ಪಾಟ್, ರಸ್ತೆ ಬದಿಯ ಕಸ ತೆರವುಗೊಳಿಸಲು "ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮ" ಹಮ್ಮಿಕೊಳ್ಳಲು ಕ್ರಮ ವಹಿಸುವಂತೆ ಕಾರ್ಯದರ್ಶಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

- ಶ್ರೀಗಂಧದ ಕಾವಲು ಮುಖ್ಯರಸ್ತೆ, ಹೆಲ್ತ್ ಬಡಾವಣೆ ನಾಗರಬಾವಿ ನಿವಾಸಿಯಾದ ಶ್ರೀಮತಿ ಸೋನಿ ಶರ್ಮ ರವರು ತಮ್ಮ ಮನೆಯ ಪಕ್ಕದಲ್ಲಿ ಫುಟ್ ಪಾತ್ ಮೇಲೆ ಬೀಡಾ ಸ್ಟಾಲ್ ಅಂಗಡಿ ನಡೆಸುತ್ತಿದ್ದು, ಇಲ್ಲಿಗೆ ಬರುವ ಗ್ರಾಹಕರು ತಮ್ಮ ಮನೆಯ ಗೇಟ್ ಮುಂಭಾಗಕ್ಕೆ ಬಂದು ಧೂಮಪಾನ ಮಾಡುತ್ತಿರುವುದರಿಂದ ಮನೆಯಲ್ಲಿ ವಾಸವಿರುವ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ವಸತಿ ಪ್ರದೇಶದಲ್ಲಿ ಇರುವ ಅಂಗಡಿಯ ವಾಣಿಜ್ಯ ಪರವಾನಗಿಯನ್ನು ಪರಿಶೀಲಿಸಿ ಅನಧಿಕೃತವಾಗಿದ್ದಲ್ಲಿ ತೆರವುಗೊಳಿಸಬೇಕೆಂದು ಸಹಾಯಕ ಅಭಿಯಂತರರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಲ್ಲಿ ಕೋರಿದರು.

  ಕ್ರಮ: ಸಹಾಯಕ ಅಭಿಯಂತರರು ವಾರ್ಡ್–129 ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ)

ಸಹಾಯ ಆಪ್ ನಲ್ಲಿ ದಾಖಲಾಗಿರುವ ದೂರುಗಳಿಗೆ ಸಂಬಂಧಿಸಿದಂತೆ ಆದ್ಯತೆ ಮೇರೆಗೆ ಕ್ರಮ ವಹಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೂ ಸೂಚಿಸುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಮೇಲಿನ ದೂರುಗಳಿಗೆ ಸಂಬಂಧಿಸಿದ ಅಧಿಕಾರಿಗಳು, ಅವರ ವ್ಯಾಪ್ತಿಯ ದೂರುಗಳಿಗೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ತಪ್ಪದೇ ವರದಿ ಮಾಡಲು ತಿಳಿಸಿದೆ.

| | |
|---|---|
| ಸಹಿ/– | ಸಹಿ/– |
| ಕಾರ್ಯದರ್ಶಿಗಳು ವಾರ್ಡ್ ಸಮಿತಿ | ನೋಡಲ್ ಅಧಿಕಾರಿಗಳು |
| ವಾರ್ಡ್ ಸಂಖ್ಯೆ–129 | ವಾರ್ಡ್ ಸಂಖ್ಯೆ–129 |

***ಪ್ರತಿಯನ್ನು:***

1. ಆಪ್ತಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾರಾನಗರ ವಲಯರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.